**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ ನರಸೀಪುರ**

**ಸಿ ಸಿ ಸಂಖ್ಯೆ: 180/2023**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಟಿ ನರಸೀಪುರ ಆದ ನಾನು

1. ಜಯಕುಮಾರ್ ಬಿನ್ ಲೇಟ್ ಪುಟ್ಟರಂಗಯ್ಯ,
   30 ವರ್ಷ.

2. ಮಹೇಶ್ ಎಂ.ಬಿ. ಬಿನ್ ಲೇಟ್ ಪುಟ್ಟರಂಗಯ್ಯ
   45 ವರ್ಷ.

3. ಮಹದೇವ ಬಿನ್ ಲೇಟ್ ಸಣ್ಣಯ್ಯ,
   38 ವರ್ಷ.

4. ಪರಶಿವಮೂರ್ತಿ ಬಿನ್ ಲೇಟ್ ಪುಟ್ಟರಂಗಯ್ಯ
   45 ವರ್ಷ.

ಎಲ್ಲರ ವಾಸಃ ಮೂಗೂರು ಗ್ರಾಮ
ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆ:-

ಮೊದಲನೆಯದಾಗಿ, ದಿನಾಂಕ 30.06.2022 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ, ತಿ.ನರಸೀಪುರ ಪೋಲಿಸ್ ಠಾಣಾ ಸರಹದ್ದಿನ, ತಿ. ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮದ ಚಾಸಾ-1/ಮಹದೇವಪ್ರಸಾದ್ ಅಲಿಯಾಸ್ ಗೌತಮ್ ರವರ ಮನೆಯ ಮುಂಭಾಗದಲ್ಲಿ, 1ನೇ ಆರೋಪಿತರಾದ ನೀವು ಚಾಸಾ-7/ಪ್ರಭುಸ್ವಾಮಿ ರವರೊಂದಿಗೆ ಗಲಾಟೆ ಮಾಡುತ್ತಿದ್ದಾಗ, ಅದನ್ನು ಚಾಸಾ-

1 ರವರು ಕೇಳಿದಾಗ, 1ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ ಅವ್ಯಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮಧಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ದಿನಾಂಕ 01.07.2022 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಮೂಗೂಗು ಗ್ರಾಮದ ಮಹದೇವಯ್ಯ ರವರ ಮನೆಯ ಮುಂಭಾಗದ ಬಾವಿ ಕಟ್ಟೆಯ ಬಳಿ ಇರುವ ಖಾಲಿ ನಿವೇಶನದಲ್ಲಿ, ಹಿಂದಿನ ದಿನದ ಗಲಾಟೆಯ ವಿಚಾರದಲ್ಲಿ ಆರೋಪಿತರಾದ ನೀವು ದ್ವೇಷವನ್ನು ಹೊಂದಿ, ಸಮಾನ ಉದ್ದೇಶದಿಂದ, ನೀವು ಚಾಸಾ-1 ರವರನ್ನು ಅಡ್ಡಗಟ್ಟಿ ಅವರಿಗೆ ಅಕ್ರಮ ತಂಡೆಯುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 2ನೇ ಆರೋಪಿತರಾದ ನೀವು ಮಚ್ಚಿನಿಂದ ಚಾಸಾ-1 ರವರ ಬಲಗಾಲಿನ ಮಂಡಿಗೆ ಹೊಡೆದು ಮತ್ತು 1ನೇ ಆರೋಪಿತರಾದ ನೀವು ರಿಪೀಸ್ ಪಟ್ಟಿಯಿಂದ ಚಾಸಾ-1ರವರ ಬಲಕೈಗೆ ಹೊಡೆದು ಅವರಿಗೆ ತೀವ್ರ ಸ್ವರೂಪದ ಗಾಯ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 326 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 3 ಮತ್ತು 4ನೇ ಆರೋಪಿತರಾದ ನೀವು ನಿಮ್ಮ ಕೈಗಳಿಂದ ಚಾಸಾ-1 ರವರ ಎಡಗಣ್ಣು ಮತ್ತು ಬಲಗಣ್ಣಿನ ಮೇಲ್ಭಾಗ ಹಾಗೂ ಮುಖದ ಹತ್ತಿರ ಗುದ್ದಿ ಅವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 3 ಮತ್ತು 4ನೇ ಆರೋಪಿತರಾದ ನೀವು ನಿಮ್ಮ ಕೈಗಳಿಂದ ಚಾಸಾ-1 ರವರ ಎಡ ಕಪಾಲಕ್ಕೆ ಹೊಡೆದು ಅವರ ಹಲ್ಲನ್ನು ಮುರಿದು ಹಾಕುವ ಮೂಲಕ ಅವರಿಗೆ ತೀವ್ರ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 325 ಸಹ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಆರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ, "ಇನ್ನು ಮುಂದೆ ನಮ್ಮ ವಿಚಾರಕ್ಕೆ ನೀನೇನಾದರೂ ತಲೆಹಾಕಿದರೆ ನಿನ್ನನ್ನು ಕೊಲೆ ಮಾಡುತ್ತೇವೆ" ಎಂದು ಹೇಳಿ ಅವರಿಗೆ ಕೊಲೆ ಬೆದರಿಕೆ ಹಾಕುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕ 12.05.2025. **ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ತಿ. ನರಸೀಪುರ**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ ನರಸೀಪುರ**

**ಸಿ ಸಿ ಸಂಖ್ಯೆ: 180/2023**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಟಿ ನರಸೀಪುರ ಆದ ನಾನು

1. ಜಯಕುಮಾರ್ ಬಿನ್ ಲೇಟ್ ಪುಟ್ಟರಂಗಯ್ಯ,
   30 ವರ್ಷ.

2. ಮಹೇಶ್ ಎಂ.ಬಿ. ಬಿನ್ ಲೇಟ್ ಪುಟ್ಟರಂಗಯ್ಯ
   45 ವರ್ಷ.

3. ಮಹದೇವ ಬಿನ್ ಲೇಟ್ ಸಣ್ಣಯ್ಯ,
   38 ವರ್ಷ.

4. ಪರಶಿವಮೂರ್ತಿ ಬಿನ್ ಲೇಟ್ ಪುಟ್ಟರಂಗಯ್ಯ
   45 ವರ್ಷ.
   ಎಲ್ಲರ ವಾಸಃ ಮೂಗೂರು ಗ್ರಾಮ
   ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ದ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕ 12.05.2025

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ. ನರಸೀಪುರ**